# ಅನುಭವ

## ಅನುಭವದಿಂದ ಬೆಳವಣಿಗೆ

ಬಾಳುವುದೆಂದರೆ ಬೆಳೆಯುವುದು. ಬೆಳೆಯುವುದು ಸ್ವಾಭಾವಿಕ ಕ್ರಿಯೆ. ಒಬ್ಬ ವ್ಯಕ್ತಿ ಏನೂ ಮಾಡದೆಯೂ ಬೆಳೆಯುತ್ತ ಹೋಗುತ್ತಾನೆ. ಹುಟ್ಟಿದ ಮಗು ಮಗುವಾಗಿಯೇ ಉಳಿಯುವುದಿಲ್ಲ. ಅದು ದೈಹಿಕವಾಗಿ ಬೆಳೆಯುತ್ತ ಹೋಗುತ್ತದೆ. ಆದರೆ ಈ ಬೆಳವಣಿಗೆ ಸಮರ್ಪಕವಾಗಬೇಕಾದರೆ ಸರಿಯಾದ ಶಿಕ್ಷಣ, ತರಬೇತಿ, ಉತ್ತಮ ಆಹಾರ ಇತ್ಯಾದಿಗಳು ಆವಶ್ಯಕ. ಸ್ವಾಭಾವಿಕ ಬೆಳವಣಿಗೆಯನ್ನು ಸಮರ್ಪಕ ಬೆಳವಣಿಗೆಯನ್ನಾಗಿಸುವುದೇ ಬದುಕು—ನಿಜವಾದ ಅರ್ಥದಲ್ಲಿ. ಇದು ಕೇವಲ ಶಾರೀರಿಕ ಬೆಳವಣಿಗೆಗೆ ಮಾತ್ರವಲ್ಲದೆ ಮಾನಸಿಕ ಬೆಳವಣಿಗೆಗೂ ಅನ್ವಯಿಸುತ್ತದೆ. ಮಾನಸಿಕ ಬೆಳವಣಿಗೆಗೆ ಸರಿಯಾದ ನೈತಿಕ ಶಿಕ್ಷಣ, ತರಬೇತಿ, ಉತ್ತಮ ಜ್ಞಾನದ ಆಹಾರ ಇತ್ಯಾದಿಗಳು ಆವಶ್ಯಕ. ಹೀಗೆಯೇ ಆಧ್ಯಾತ್ಮಿಕ ಬೆಳವಣಿಗೆಯೂ ಕೂಡ. ಅದಕ್ಕನುಗುಣವಾದ ಧ್ಯಾನ ಜಪಾದಿ ಸಾಧನೆಗಳ ಮೂಲಕ ಅದನ್ನು ಸಾಧಿಸಬೇಕು. ಹೀಗೆ ದೈಹಿಕವಾಗಿಯೂ ಮಾನಸಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಬೆಳೆಯುವುದೇ ಬದುಕು.

ಈ ಬೆಳವಣಿಗೆಗೆ ಮುಖ್ಯ ಆಧಾರ ಅನುಭವ. ಒಂದು ಮಗು ಹುಟ್ಟಿದಂದಿನಿಂದಲೂ ಅನುಭವವನ್ನು ಪಡೆಯುತ್ತ ಬೆಳೆಯುತ್ತ ಹೋಗುತ್ತದೆ. ಅದು ಇತರರ ನಡೆನುಡಿಗಳನ್ನೂ ಅವರ ಕೆಲಸ ಕಾರ್ಯಗಳನ್ನೂ ಅವರ ಲೋಪದೋಷಗಳನ್ನೂ ಗುಣಾವಗುಣಗಳನ್ನೂ ನೋಡುತ್ತದೆ, ಕೇವಲ ಯಾಂತ್ರಿಕವಾಗಿ ಶೂನ್ಯದೃಷ್ಟಿಯಿಂದ ನೋಡುವುದಲ್ಲ, ನೆಟ್ಟ ದೃಷ್ಟಿಯಿಂದ ನೋಡಿ ಅನುಭವಿಸುತ್ತದೆ. ಮುಕ್ತವಾಗಿ ಸ್ವಯಂಪ್ರೇರಣೆಯಿಂದ ಪ್ರತಿಸ್ಪಂದಿಸುತ್ತದೆ. ಅಲ್ಲಿ ಯಾವ ಕೃತ್ರಿಮತೆಯೂ ಇಲ್ಲ. ಒಂದು ವಿಷಯವನ್ನು ನೋಡಿ, ಗ್ರಹಿಸಿ ಅದರಿಂದ ನಮ್ಮಲ್ಲಿ ಏನೋ ಒಂದು ಪರಿಣಾಮ ಉಂಟಾದರೆ ಅದು ಅನುಭವ. ಮಕ್ಕಳಲ್ಲಿ ಈ ರೀತಿ ಅನುಭವಿಸುವ ಸಾಮರ್ಥ್ಯವಿರುವುದರಿಂದಲೆ ಅವು ಬೇಗ ಬೆಳೆಯುತ್ತವೆ, ಬೇಗ ಮಾತನಾಡುವುದನ್ನು ಕಲಿಯುತ್ತವೆ, ಬೇರೆ ಬೇರೆ ಭಾಷೆಗಳನ್ನು ಬಹುಬೇಗ ಕಲಿಯುತ್ತವೆ.

## ಅನುಭವ ಸಾಮರ್ಥ್ಯ

ಬೆಳೆಯುತ್ತ ಹೋದಂತೆ ಅನುಭವಿಸುವ ಸಾಮರ್ಥ್ಯವೂ ಕಡಿಮೆಯಾಗುತ್ತದೆ, ಅದಕ್ಕನುಗುಣವಾಗಿ ಬೆಳವಣಿಗೆಯೂ ಕುಂಠಿತವಾಗುತ್ತದೆ. ಮಕ್ಕಳು ವಸ್ತುಗಳನ್ನು ನೋಡುವ ವಿಧಾನವೇ ಬೇರೆ, ಹಿರಿಯರು ನೋಡುವ ವಿಧಾನವೇ ಬೇರೆ. ಹಿರಿಯರು ಸಾಮಾನ್ಯವಾಗಿ ಎಲ್ಲವನ್ನೂ ತಿಳಿಸಿಕೊಂಡು ಯಾಂತ್ರಿಕವಾಗಿ ನೋಡುತ್ತಾರೆ. ಯಾವುದನ್ನೂ ಸರಿಯಾಗಿ ಅನುಭವಿಸುವುದಿಲ್ಲ. ಆದರೆ ಮಕ್ಕಳನ್ನು ಹೊರಗೆ ಕರೆದುಕೊಂಡು ಹೋದರೆ ಅವು ಎಲ್ಲವನ್ನೂ ಕುತೂಹಲ ದೃಷ್ಟಿಯಿಂದ ನೋಡುತ್ತವೆ. ಕೆಲವೊಮ್ಮೆ ಅವು ನೋಡುವುದರಲ್ಲಿ ಎಷ್ಟೊಂದು ಮಗ್ನವಾಗಿಬಿಡುತ್ತವೆಂದರೆ, ಹಿರಿಯರು ಅವುಗಳ ಕೈಹಿಡಿದು ಎಳೆದುಕೊಂಡು ಹೋಗಬೇಕಾಗುತ್ತದೆ. ಆ ಒಂದು ತುಂಬು ದೃಷ್ಟಿಯಿಂದ ನೋಡುವ ಕೇಳುವ ಸಾಮರ್ಥ್ಯ ಹಿರಿಯರಲ್ಲಿ—ಕೆಲವರನ್ನು ಬಿಟ್ಟರೆ—ಇರುವುದಿಲ್ಲ. ಒಂದು ಮಗು ಒಂದು ಹೂವನ್ನು ಕಣ್ತುಂಬ ನೋಡಿ ಆನಂದಿಸುತ್ತದೆ. ಹಿರಿಯರು ಒಂದು ಹೂವನ್ನು ನೋಡಿದಾಗ, ಅದು ಯಾವ ಹೂವು, ಯಾವ ಜಾತಿಗೆ ಸೇರಿದುದು, ಮಾರಿದರೆ ಎಷ್ಟು ಹಣ ಬರುತ್ತದೆ—ಎಂದು ಮುಂತಾಗಿ ಲೆಕ್ಕಾಚಾರ ಮಾಡುತ್ತ ಹೋಗುವುದರಿಂದ ಆ ಹೂವನ್ನು ಸಂಪೂರ್ಣ ಅನುಭವಿಸಲಾರರು. ಒಂದು ಕ್ಯಾಮೆರ ಇದ್ದರೆ ಅದರ ಫೋಟೋ ತೆಗೆಯುವುದರಲ್ಲೇ ಮಗ್ನರಾಗಿ ಹೂವನ್ನು ಅನುಭವಿಸುವುದನ್ನೇ ಮರೆತುಬಿಡುತ್ತಾರೆ. ಮಕ್ಕಳ ಹಂತದಲ್ಲಿ ಆಗುವ ಕ್ಷಿಪ್ರಗತಿಯ ಬೆಳವಣಿಗೆ ಹಿರಿಯರಲ್ಲಿ ಆಗದೇ ಇರುವುದಕ್ಕೆ ಈ ಅನುಭವಸಾಮರ್ಥ್ಯದ ಕೊರತೆಯೇ ಕಾರಣ. ಮಕ್ಕಳ ಅನುಭವಸಾಮರ್ಥ್ಯವನ್ನು ನಾವು ಉಳಿಸಿಕೊಳ್ಳಬೇಕು. ಎಲ್ಲವೂ ನಮಗೆ ಒಂದು ಅನುಭವವಾಗಬೇಕು. ಅವಧೂತನಿಗೆ ಇಪ್ಪತ್ತನಾಲ್ಕು ಗುರುಗಳು ಇದ್ದರು ಎಂದು ಹೇಳುವುದರ ಅರ್ಥ, ಅವನು ಎಲ್ಲವನ್ನೂ ನೋಡಿ, ಅನುಭವಿಸಿ ಕಲಿಯುತ್ತಿದ್ದನು. ಶ್ರೀರಾಮಕೃಷ್ಣರಲ್ಲಿ ಇಂತಹ ಅನುಭವ ಸಾಮರ್ಥ್ಯವನ್ನು ಕಾಣುತ್ತೇವೆ.

> **ಅನುಭವದ ಒಂದು ಮುಳ್ಳು ಎಚ್ಚರಿಕೆಯ ದಟ್ಟಡವಿಗಿಂತಲೂ ಮೇಲು.** —Lowell (ಲೋವೆಲ್)

## ಕೆಲಸದ ಅನುಭವ

ಕೆಲಸವನ್ನು ಮಾಡುವುದು ಒಂದು, ಕೆಲಸವನ್ನು ಅನುಭವಿಸುವುದು ಇನ್ನೊಂದು. ಅನೇಕರು ಯಾಂತ್ರಿಕವಾಗಿ, ಒಂದು ಯಂತ್ರದಂತೆ ಕೆಲಸ ಮಾಡುತ್ತಾರೆ. ಹೇಗೆ ಯಂತ್ರದ ಕೆಲಸ ಯಂತ್ರದ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲವೋ—ಯಂತ್ರ ಸವೆಯುವುದು ಹೊರತಾಗಿ—ಹಾಗೆಯೇ ಅನೇಕರ ಕೆಲಸ ಕೇವಲ ದಣಿವನ್ನು ಉಂಟುಮಾಡುವುದು ಹೊರತಾಗಿ, ಬೇರೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಕೆಲಸವನ್ನು ಅರಿವಿನಿಂದ, ತುಂಬು ಮನಸ್ಸಿನಿಂದ, ಅದನ್ನು ಹೊರೆಯೆಂದು ಭಾವಿಸದೆ ಮಾಡಿದರೆ ಅದೊಂದು ಅನುಭವ

ವಾಗುತ್ತವೆ. ಈ ರೀತಿ ಅನುಭವಿಸಿ ಮಾಡಿದ ಕೆಲಸ ಬೆಳವಣಿಗೆಗೆ ಸಹಾಯಕವಾಗುತ್ತವೆ. ಕೇವಲ ಕೆಲಸವನ್ನು ಬೆಳೆಸುವುದರ ಜೊತೆಗೆ ಕೆಲಸದೊಂದಿಗೆ ನಾವು ಬೆಳೆಯಬೇಕು. ಸರಿಯಾದ ಮನೋಭಾವದಿಂದ ಮಾಡಿದ ಕೆಲಸ ದೇಹದ ಮೇಲೂ ಮನಸ್ಸಿನ ಮೇಲೂ ಸತ್ಪರಿಣಾಮವನ್ನು ಉಂಟುಮಾಡುತ್ತದೆ. (ಕೆಲಸದ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇದೇ ಪತ್ರಿಕೆಯ ೨೦೦೩, ಏಪ್ರಿಲ್ ಮತ್ತು ಮೇ ಸಂಚಿಕೆಗಳಲ್ಲಿನ ಸಂಪಾದಕೀಯಗಳನ್ನು ನೋಡಿ.)

### ಸೌಂದರ್ಯಾನುಭವ

ಒಂದು ಕೆಲಸದಲ್ಲಿ ವ್ಯಕ್ತಿ, ವಸ್ತು ಮತ್ತು ವಾತಾವರಣ ಈ ಮೂರೂ ಸೇರಿಕೊಂಡಿರುತ್ತವೆ. ವ್ಯಕ್ತಿಯನ್ನು ಮಾನವೀಯ ದೃಷ್ಟಿಯಿಂದ ನೋಡಿದಾಗ ಅದು ಅನುಭವವಾಗುತ್ತದೆ. ಆ ವ್ಯಕ್ತಿ ನಮ್ಮ ವಿಚಾರದಲ್ಲಿ ಹಾಗೆ ಮಾಡದಿರಬಹುದು. ಆದರೆ ನಮ್ಮ ದೃಷ್ಟಿ ಬದಲಾವಣೆಯಿಂದ ನಮಗೇ ಪ್ರಯೋಜನವಾಗುತ್ತದೆ. ಹಾಗೆಯೇ ವಸ್ತುವನ್ನೂ ಗೌರವದಿಂದ ಕಾಣುವುದರ ಮೂಲಕ, ಅದನ್ನು ಸರಿಯಾದ ರೀತಿಯಲ್ಲಿ ಎಚ್ಚರಿಕೆಯಿಂದ ಉಪಯೋಗಿಸಿಕೊಳ್ಳುವುದರ ಮೂಲಕ ಅದರ ಪೂರ್ಣ ಅನುಭವವನ್ನು ನಾವು ಪಡೆಯಬಹುದು. ಚಿಕ್ಕ ಮಕ್ಕಳು ಕೆಲಸವನ್ನು ಆಟದಂತೆ ಮಾಡುತ್ತವೆ, ಎಲ್ಲ ವಸ್ತುಗಳೂ ಆಟದ ಸಾಮಾನುಗಳಾಗಿ ಅವಕ್ಕೆ ಜೀವಂತವಾಗಿ ಕಾಣುತ್ತವೆ. ಹೀಗೆ ನಮ್ಮ ಪಾಲಿಗೆ ಪ್ರತಿಯೊಂದೂ ಜೀವಕಳೆಯಿಂದ ತುಂಬಿತುಳುಕುವಂತಾದರೆ ಅದರ ಪರಿಣಾಮ ಎಂತಹುದು ಎಂಬುದನ್ನು ನಾವು ಊಹಿಸಬಹುದು. ಹಾಗೆಯೇ ಪ್ರತಿಯೊಂದೂ ಚೈತನ್ಯಮಯವಾಗಿ ಕಂಡರೆ! ಆ ಅನುಭವವನ್ನು ವರ್ಣಿಸಲು ಸಾಧ್ಯವೇ? ನಾವು ಯಾಂತ್ರಿಕತೆಯನ್ನು ಮೀರಿದಂತೆಲ್ಲ, ಚೈತನ್ಯದೆಡೆಗೆ ಸಾಗಿದಂತೆಲ್ಲ ನಮ್ಮ ಅನುಭವ ಆಳವೂ ವಿಸ್ತಾರವೂ ಆಗುತ್ತದೆ. ನಿಜವಾಗಿ ಬದುಕುವುದೆಂದರೆ ಇದೇ. ಅನುಭವವೇ ಬದುಕು. ಒಂದು ಯಂತ್ರ ಬದುಕುವುದಿಲ್ಲ, ಅದು ಇರುತ್ತದೆ, ಕೆಲಸ ಮಾಡುತ್ತದೆ ಅಷ್ಟೇ. ಏಕೆಂದರೆ ಅದು ಅನುಭವಿಸಲಾರದು. ನಾವು ಎಷ್ಟರಮಟ್ಟಿಗೆ ಅನುಭವಿಸುತ್ತೇವೆಯೋ ಅಷ್ಟರಮಟ್ಟಿಗೆ ಬದುಕಿರುತ್ತೇವೆ. ಹಾಗೆಯೇ ನಾವು ವಾತಾವರಣವನ್ನೂ ಗೌರವಿಸಬೇಕು. ವಾತಾವರಣವನ್ನು ಅನುಭವಿಸುವ ಕಲೆಯನ್ನು ನಾವು ಕಲಿತುಕೊಂಡರೆ ಆಗ ಅದರ ದುರ್ಬಳಕೆ ಮಾಡುವುದಿಲ್ಲ. ಶ್ರೀರಾಮಕೃಷ್ಣರಲ್ಲಿ ಪ್ರಕೃತಿಯ ಸೌಂದರ್ಯವನ್ನು ಅನುಭವಿಸುವ ಸೂಕ್ಷ್ಮತೆ ಇತ್ತು. ಆದ್ದರಿಂದಲೇ ಅವರು ಪೂರ್ಣರೂಪದಲ್ಲಿ ಬದುಕಿದರು, ಆನಂದದಿಂದ ಬದುಕಿದರು. ಸೌಂದರ್ಯಾನುಭವ ಬಾಳಿನ ಅತಿ ಮುಖ್ಯ ಅಂಶ.

ಇಂದಿನ ಕೈಗಾರಿಕಾ-ತಾಂತ್ರಿಕ ಯುಗದಲ್ಲಿ ಈ ಸೌಂದರ್ಯಾನುಭವದ ಕೊರತೆ ಎದ್ದುಕಾಣುತ್ತಿದೆ. ನಮ್ಮದು ಧಾವಂತ ಜೀವನ. ಈ ಓಟದ ಸ್ಪರ್ಧೆಯಲ್ಲಿ ಏನನ್ನು ಅನುಭವಿಸಲು ಸಾಧ್ಯ? ನಮ್ಮ ಸುತ್ತಮುತ್ತ ನೋಡಲೂ ನಮಗೆ ಸಮಯವಿಲ್ಲ, ತಾಳ್ಮೆಯೂ ಇಲ್ಲ. ನಾವು ಗಳಿಕೆಯ ಭರದಲ್ಲಿ ಅನುಭವಿಸುವುದನ್ನು ಮರೆತೇಬಿಟ್ಟಿದ್ದೇವೆ. ನಮ್ಮ ಇಂದ್ರಿಯಸುಖ ಕೇವಲ ತಾತ್ಕಾಲಿಕ ಉದ್ರೇಕದಲ್ಲಿಯೇ ಕೊನೆಗೊಳ್ಳುತ್ತದೆ, ಅದರ ಪೂರ್ಣ ಅನುಭವವನ್ನು ಪಡೆಯುವುದಕ್ಕೂ ಸಮಯವಿಲ್ಲ. ಕೇವಲ ಹಸಿವನ್ನು ನೀಗಿಸುವುದಕ್ಕಾಗಿಯೇ ಊಟ ಮಾಡುತ್ತೇವೆ, ಊಟದ ಸವಿಯನ್ನು ಅನುಭವಿಸುವುದಕ್ಕೆ ನಮಗೆ ಸಮಯವಿಲ್ಲ. ಶ್ರೀರಾಮಕೃಷ್ಣರು ರುಚಿಯನ್ನು ಅನುಭವಿಸಿ ಉಣ್ಣುತ್ತಿದ್ದರು. ಇಂದ್ರಿಯ ವಿಷಯದ ಸವಿಯನ್ನು ಅನುಭವಿಸಬೇಕು ಎಂದ ಮಾತ್ರಕ್ಕೆ ಅದರಲ್ಲಿ ಅತಿಯಾಗಿ ನಮ್ಮನ್ನು ತೊಡಗಿಸಿಕೊಳ್ಳಬೇಕೆಂದಲ್ಲ. ಆದರೆ ಮಿತಿಯಾದ ಅನುಭವದಲ್ಲಿಯೇ ಅದರ ನಿಜವಾದ ಸವಿ ಇರುವುದು. ಇಂತಹ ಅನುಭವದಿಂದ ವ್ಯಕ್ತಿ ಬೆಳೆದು ಇಂದ್ರಿಯವನ್ನು ಮೀರಿಹೋಗುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಈ ಸಾಮರ್ಥ್ಯವೇ ನೈತಿಕ ಬೆಳವಣಿಗೆಗೆ ತಳಹದಿ.

### ನೈತಿಕ ಅನುಭವ

ಅನೇಕರು ನೈತಿಕವಾಗಿ ವರ್ತಿಸುತ್ತಾರೆ, ಆದರೆ ನೀತಿಯನ್ನು ಅನುಭವಿಸುವುದಿಲ್ಲ. ಸತ್ಯವಚನ ಪರಿಪಾಲನೆ ಒಂದು, ಆದರೆ ಆಂತರಿಕ ಸತ್ಯನಿಷ್ಠೆಯಿಂದ ಲಭಿಸುವ ಮಾನಸಿಕ ಸ್ಥಿರತೆಯನ್ನು ಅನುಭವಿಸುವುದು ಇನ್ನೊಂದು. ಹೊರಗೆ ಹಿಂಸೆ ಮಾಡದಿರುವುದು ಒಂದು, ಆದರೆ ದ್ವೇಷ ಅಸೂಯೆಗಳಿಂದ ಮುಕ್ತವಾದ ಮನಸ್ಸಿನಲ್ಲಿ ಉದ್ಭವಿಸುವ ಅಂತರಾನಂದವನ್ನು ಅನುಭವಿಸುವುದು ಇನ್ನೊಂದು. ಈ ಆನಂದ ಕೇವಲ ಬಾಹ್ಯ ನೈತಿಕತೆಯಿಂದ ಲಭಿಸುವುದಿಲ್ಲ. ಅದು ಆಂತರಿಕ ನೈತಿಕತೆಗೆ ಪೂರಕವಾಗಬೇಕು. ಆದರೆ ಅದಕ್ಕೇ ಕೇವಲ ಅಂಟಿಕೊಂಡಿದ್ದರೆ ಅದೊಂದು ಯಾಂತ್ರಿಕ ಕ್ರಿಯೆಯಾಗಿ ಬೆಳವಣಿಗೆಗೆ ಸಾಧಕವಾಗುವುದಿಲ್ಲ, ಬದಲು ಬಾಧಕವೇ ಆಗಬಹುದು.

### ಜ್ಞಾನಾನುಭವ

> ನಾವು ಪುಸ್ತಕಗಳನ್ನು ಓದಬಹುದು, ಉಪನ್ಯಾಸಗಳನ್ನು ಕೇಳಬಹುದು, ಉದ್ದುದ್ದ ಮಾತನಾಡಬಹುದು. ಆದರೆ ಅನುಭವವೇ ನಮಗೆ ಬೋಧಕ, ನಮ್ಮ ಕಣ್ತೆರೆಯುವ ಸಾಧನ.
>
> —ಸ್ವಾಮಿ ವಿವೇಕಾನಂದ

ಶಾಲೆ ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಾರೆ, ಆದರೆ ಅದನ್ನು ಅನುಭವಿಸುವುದಿಲ್ಲ —ಅದು ಬೇರೊಂದಕ್ಕೆ ಸಾಧನ, ಅದೇ ಸಾಧ್ಯವಲ್ಲ. ಅದು ಯಾವುದಕ್ಕೆ ಸಾಧನವೋ ಆ ಸಾಧ್ಯವೂ ಕೊನೆಗೆ ಇನ್ನೊಂದಕ್ಕೆ ಸಾಧನವಾಗುತ್ತದೆ. ಹೀಗೆ ಕೊನೆಯಿಲ್ಲದೆ ಇದು ಮುಂದುವರಿದು ಸಾಧ್ಯವನ್ನೇ ನಾವು ಕಳೆದುಕೊಳ್ಳುತ್ತೇವೆ. ಇದು ನಿರಂತರವಾಗಿ ಮುಂದೆ ಸಾಗುವ ಗುರಿಯನ್ನು ಮುಟ್ಟುವ ಪ್ರಯತ್ನದಂತೆ. ಪ್ರತಿಯೊಂದೂ ಸಾಧ್ಯವಾಗಬೇಕು, ಮತ್ತು ಮುಂದಿನದಕ್ಕೆ ಸಾಧನವೂ ಆಗಬೇಕು. ಪ್ರತಿಯೊಂದನ್ನೂ ಸಾಧ್ಯವೆಂಬಂತೆ ಅನುಭವಿಸದಿದ್ದರೆ ಅದು ಮುಂದಿನ ಸಾಧ್ಯಕ್ಕೆ ಸಾಧನವಾಗಲಾರದು. ಅದಕ್ಕೇ ಸ್ವಾಮಿ ವಿವೇಕಾನಂದರು ಸಾಧ್ಯ ಸಾಧನಗಳೆರಡಕ್ಕೂ ಸಮಾನ ಪ್ರಾಮುಖ್ಯವನ್ನು ನೀಡಬೇಕೆಂದು ಹೇಳಿದರು.

ಶಿಕ್ಷಣವೆಂದರೆ ಜ್ಞಾನಾರ್ಜನೆ ಮಾತ್ರವಲ್ಲ, ಜ್ಞಾನವನ್ನು ಅನುಭವಿಸುವುದೂ ಕೂಡ. ಜ್ಞಾನವನ್ನು ನಾವು ಪ್ರೀತಿಸಿ, ಸರಿಯಾದ ರೀತಿಯಲ್ಲಿ ಅದನ್ನು ಪಡೆದು, ಚಿಂತನಮಂಥನಗಳ ಮೂಲಕ ಅದನ್ನು ಸರಿಯಾದ ರೀತಿಯಲ್ಲಿ ಅರಗಿಸಿಕೊಂಡಾಗ ಶಿಕ್ಷಣ ಒಂದು ಅನುಭವವಾಗುತ್ತದೆ ಮತ್ತು ಮಾನಸಿಕ ಬೆಳವಣಿಗೆಗೆ ಸಹಾಯಕವಾಗುತ್ತದೆ. ಶಿಕ್ಷಣ ಮುಂದಿನದಕ್ಕೆ ಒಂದು ಸಾಧನವಾದರೂ, ಅದನ್ನು ಒಂದು ಸಾಧ್ಯವಾಗಿಯೂ ನಾವು ಅನುಭವಿಸಬೇಕು. ಆಗ ಅದರ ಸಾಧ್ಯತೆಗಳೂ ಅಧಿಕವಾಗುತ್ತವೆ. ಶಿಕ್ಷಣದ ಮೌಲ್ಯ ಮನಶ್ಶಕ್ತಿಯನ್ನು ವೃದ್ಧಿಸುವುದರಲ್ಲಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಶಿಕ್ಷಣದಿಂದ ಪಡೆದ ಜ್ಞಾನ ನಮ್ಮ ಮನಶ್ಶಕ್ತಿಯನ್ನು ವೃದ್ಧಿಸದಿದ್ದರೆ ಅದನ್ನು ಸರಿಯಾಗಿ ಜೀರ್ಣಿಸಿಕೊಂಡಿಲ್ಲವೆಂದು ಅರ್ಥ. ಇದೊಂದು ಬೌದ್ಧಿಕ ಅಜೀರ್ಣರೋಗ. ಈ ರೋಗವೇ ಜೀವನದ ನಿಸ್ಸಾರ್ಥಕತೆಗೆ ಕಾರಣವಾಗುತ್ತದೆ. ಇಂದಿನ ಅನೇಕ ಯುವಕರು ಜೀವನದ ನಿಸ್ಸಾರ್ಥಕತೆಯಿಂದ ನರಳುತ್ತಿರುವುದಕ್ಕೆ ಕಾರಣ ಶಿಕ್ಷಣ ನಿಜಜೀವನದಿಂದ ದೂರವಾಗಿರುವುದು. ಎಲ್ಲವೂ ಅರ್ಥಪೂರ್ಣವಾಗುವುದು ಅದನ್ನು ಅನುಭವಿಸಿದಾಗಲೇ. ನಾವು ಜೀವನ ಕಳೆಯುತ್ತೇವೆ, ಅದನ್ನು ಅನುಭವಿಸುವುದಿಲ್ಲ. ಜೀವನವನ್ನು ನಾವು ಅನುಭವಿಸಿದಾಗ ಅದು ಅರ್ಥಪೂರ್ಣವಾಗುತ್ತದೆ.

### ಮಾನವಾನುಭವ

ನಾವು ಜನರನ್ನು ಸಂಧಿಸುತ್ತೇವೆ, ಅವರೊಡನೆ ವ್ಯವಹರಿಸುತ್ತೇವೆ, ಅವರೊಡನೆ ಬಾಳುವೆಯನ್ನೂ ನಡೆಸುತ್ತೇವೆ. ಆದರೆ ನಾವು ಅವರನ್ನು ಅನುಭವಿಸುವುದಿಲ್ಲ. ಹಾಗೆಂದರೆ ನಮ್ಮ ಸುಖಕ್ಕಾಗಿ, ನಮ್ಮ ಪ್ರಯೋಜನಕ್ಕಾಗಿ ಅವರನ್ನು ಬಳಸಿಕೊಳ್ಳಬೇಕೆಂದಲ್ಲ. ನಾವು ಈಗ ಮಾಡುತ್ತಿರುವುದು ಅದನ್ನೇ. ನಾವು ಅವರನ್ನು ನೋಡುವುದೆಂದರೆ ಅವರ ಸುಖದುಃಖಗಳನ್ನು ಭಾವಿಸುವುದು. ವ್ಯಕ್ತಿಯ ಹೊರರೂಪವನ್ನು ಮಾತ್ರ ನೋಡದೆ ಅವನ ಒಳಹೊಕ್ಕು ಅವನನ್ನು ಅರಿಯುವ ಪ್ರಯತ್ನ ಅನುಭವಕ್ಕೆ ಎಡೆ ಮಾಡಿಕೊಡುತ್ತದೆ. ವ್ಯಕ್ತಿಯ ಮುಖಭಾವ, ಅವನ ನಡೆನುಡಿ, ಅವನ ಕಣ್ಣುಗಳು ಮುಂತಾದುವುಗಳು ಅವನ ಬಗ್ಗೆ ಎಷ್ಟೋ ವಿಷಯಗಳನ್ನು ತಿಳಿಸಿಕೊಡುತ್ತವೆ, ಮತ್ತು ನಮ್ಮಲ್ಲಿ ವಿವಿಧ ಭಾವಗಳನ್ನು ಕೆರಳಿಸುತ್ತವೆ. ಇದು ವ್ಯಕ್ತಿಯನ್ನು ಅನುಭವಿಸುವ ವಿಧಾನ. ಕೆಲವು ಸಾಹಿತಿಗಳು ಈ ರೀತಿ ವ್ಯಕ್ತಿಗಳನ್ನು ಅನುಭವಿಸಿ ಸುಂದರ ವ್ಯಕ್ತಿಚಿತ್ರವನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ.

ಒಂದು ಮಗು ನಿಮ್ಮನ್ನು ನೆಟ್ಟ ದೃಷ್ಟಿಯಿಂದ ನೋಡುವುದನ್ನು ನೀವು ಗಮನಿಸಿರಬಹುದು. ಆ ದೃಷ್ಟಿಯ ಮೂಲಕ ಅದು ನಿಮ್ಮೊಡನೆ ಮಾತನಾಡುತ್ತದೆ. ಅದು ನಿಮ್ಮನ್ನು ನೋಡಿ ಭಯದಿಂದ ಅಳಬಹುದು, ಇಲ್ಲವೇ ಮುಗುಳ್ನಗಬಹುದು. ಆ ಸಹಜ ಮುಗುಳ್ನಗೆ ಎಂಥ ಆನಂದವನ್ನು ನೀಡುತ್ತದೆ! ಇದು ಅನುಭವ. ಇಲ್ಲಿ ಆ ಮಗುವೂ ನಿಮ್ಮನ್ನು ಅನುಭವಿಸುತ್ತದೆ, ನೀವೂ ಅದನ್ನು ಅನುಭವಿಸುತ್ತೀರಿ. ಅದು ಅತ್ತಾಗಲೂ ಒಂದು ಅನುಭವವಾಗುತ್ತದೆ. ಹೀಗೆ ನಾವು ಎಲ್ಲ ವ್ಯಕ್ತಿಗಳನ್ನೂ ಅನುಭವಿಸುವುದನ್ನು ಕಲಿಯಬೇಕು. ಇದು ನಮ್ಮನ್ನು ಹೆಚ್ಚು ಮಾನವರನ್ನಾಗಿ ಮಾಡುತ್ತದೆ, ಮಾನವೀಯ ಸಂಬಂಧವನ್ನು ಉತ್ತಮಗೊಳಿಸುತ್ತದೆ ಮತ್ತು ನಾವು ದೈವತ್ವಕ್ಕೇರಲು ಸಹಾಯಕವಾಗುತ್ತದೆ.

### ಧರ್ಮಾನುಭವ

ಧರ್ಮದಲ್ಲಿ ಅನೇಕ ಆಚರಣೆಗಳು, ಕ್ರಿಯಾವಿಧಿಗಳು ಇವೆ. ಅನೇಕರು ಅವುಗಳ ಅರ್ಥವನ್ನು ತಿಳಿಯದೆ, ಮೂಢನಂಬಿಕೆಯಿಂದಲೂ ಮತಭ್ರಾಂತಿಯಿಂದಲೂ ಅವುಗಳನ್ನು ಅನುಸರಿಸುತ್ತಾರೆ. ಇಡೀ ಜೀವನವೆಲ್ಲ ಅವುಗಳನ್ನು ಅನುಸರಿಸುತ್ತಿದ್ದರೂ ಅದರಿಂದ ಯಾವುದೇ ಆಧ್ಯಾತ್ಮಿಕ ಪ್ರಯೋಜನವಾಗುವುದಿರಲಿ, ಗಣನೀಯವಾದ ಬೇರೆ ರೀತಿಯ ಪ್ರಯೋಜನವೂ ಆಗಿರುವುದಿಲ್ಲ. ಆದರೂ ಇದನ್ನು ಸ್ವಲ್ಪವೂ ವಿಚಾರ ಮಾಡದೆ ಅಂಧಾನುಸರಣೆ ಮಾಡುತ್ತಾರೆ. ಜನರು ಧಾರ್ಮಿಕ ಕರ್ಮಗಳನ್ನು ಹೇಗೆ ನಿಷ್ಕಾಮ ಬುದ್ಧಿಯಿಂದ ಮಾಡುತ್ತಾರೋ ಹಾಗೆಯೇ ಲೌಕಿಕ ಕರ್ಮಗಳನ್ನೂ ಮಾಡಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು! ಲೌಕಿಕ ಕರ್ಮಗಳ ಹಿಂದೆ ಅಸಂಖ್ಯ ಆಸೆ ಆಕಾಂಕ್ಷೆಗಳಿರುತ್ತವೆ. ಆದರೆ ಧಾರ್ಮಿಕ ಕರ್ಮಗಳನ್ನು ಮಾತ್ರ ಜನರು ಯಾವ ಆಧ್ಯಾತ್ಮಿಕ ಪ್ರಯೋಜನದ ಕಡೆಗೂ ಗಮನ ಹರಿಸದೆ ನಿರ್ಲಿಪ್ತ ಭಾವದಿಂದ ಆಚರಿಸುತ್ತಾರೆ! ಇತ್ತೀಚೆಗೆ ಈ ವಾಣಿಜ್ಯ ಯುಗದಲ್ಲಿ ಧಾರ್ಮಿಕ ವಿಧಿಗಳೂ ಅತ್ಯಂತ ಲೌಕಿಕವಾಗುತ್ತಿರುವುದು ಶೋಚನೀಯ. ಸ್ವಾಮಿ ವಿವೇಕಾನಂದರು ಲೌಕಿಕವನ್ನು ಆಧ್ಯಾತ್ಮಿಕಗೊಳಿಸಲು ಹೇಳಿದರು. ಆದರೆ ನಾವು ಆಧ್ಯಾತ್ಮಿಕವನ್ನೇ ಲೌಕಿಕಗೊಳಿಸುತ್ತಿದ್ದೇವೆ!

> **ಎಲ್ಲಿಯಾದರೂ ವ್ಯಾಪಾರ ಮತ್ತು ವ್ಯಾಪಾರ ತತ್ತ್ವಗಳು ಧರ್ಮದೊಡನೆ ಸೇರಿಕೊಂಡರೆ ಆಧ್ಯಾತ್ಮಿಕತೆ ಸಾಯುತ್ತದೆ.**
>
> — *ಸ್ವಾಮಿ ವಿವೇಕಾನಂದ*

ಅನುಭವಕ್ಕಿಂತ ಗಳಿಕೆಯೇ ಪ್ರಧಾನವಾದರೆ ಈ ರೀತಿಯಾಗುವುದು ಸ್ವಾಭಾವಿಕ. ನಾವು ಧಾರ್ಮಿಕ ಕರ್ಮಗಳನ್ನು, ಅವುಗಳ ಅರ್ಥವನ್ನು ಗ್ರಹಿಸಿ, ಪೂರ್ಣ ಅರಿವಿನಿಂದ, ತುಂಬು ಹೃದಯದಿಂದ, ಯಾಂತ್ರಿಕವಾಗಿಯಲ್ಲದೆ, ಹೇಗೋ ನಮ್ಮ ಪದ್ಧತಿಯನ್ನೂ ಸಂಪ್ರದಾಯವನ್ನೂ ಉಳಿಸಿಕೊಳ್ಳಬೇಕು ಎಂಬ ಮನೋಭಾವದಿಂದ ಹೊರತಾಗಿ, ಮತೀಯ ಅಂಧವಿಶ್ವಾಸವನ್ನು ತೊರೆದು ಅನುಸರಿಸಿದರೆ ಅದು ಅನುಭವವಾಗುತ್ತದೆ. ಆಹಾರವನ್ನು ಸರಿಯಾದ ರೀತಿಯಲ್ಲಿ ಸ್ವೀಕರಿಸಿದರೆ ಅದು ದೇಹಕ್ಕೆ ಶಕ್ತಿಯನ್ನೂ ಪೌಷ್ಟಿಕತೆಯನ್ನೂ ನೀಡುವಂತೆ, ಈ ಧಾರ್ಮಿಕ ಕ್ರಿಯಾವಿಧಿಗಳನ್ನು ಅನುಭವಪೂರ್ವಕ ಆಚರಿಸಿದರೆ ಅವುಗಳು ಆಧ್ಯಾತ್ಮಿಕವಾಗಿ ನಮಗೆ ಪುಷ್ಟಿಯನ್ನು ನೀಡುತ್ತವೆ.

## ಆಧ್ಯಾತ್ಮಿಕ ಅನುಭವ

ಈ ಪುಷ್ಟಿ ಯಾವುದೆಂದರೆ ಚಿತ್ತಶುದ್ಧಿ ಮತ್ತು ಮಾನಸಿಕ ಏಕಾಗ್ರತೆ—ಅಂದರೆ ಮನಸ್ಸು ಧ್ಯಾನಯೋಗ್ಯವಾಗುತ್ತದೆ, ಧ್ಯಾನಾಸಕ್ತವಾಗುತ್ತದೆ. ಚಿಂತನಾತರಂಗಗಳಿಂದಲೂ ಭಾವವಿಕಾರಗಳಿಂದಲೂ ಮುಕ್ತವಾದ ಮನಸ್ಸು ಶಾಂತವಾಗಿ, ರಾತ್ರಿ ಹಕ್ಕಿಯು ತನ್ನ ಗೂಡನ್ನು ಸೇರುವಂತೆ, ಧ್ಯೇಯವಸ್ತುವಿನಲ್ಲಿ ಮಗ್ನವಾಗುತ್ತದೆ. ಆಗ ಧ್ಯಾನ ಒಂದು ಅನುಭವವಾಗುತ್ತದೆ. ಪ್ರಾರಂಭದ ಹಂತದಲ್ಲಿ ಧ್ಯಾನವೆಂದರೆ ಮನಸ್ಸಿನೊಡನೆ ಹೋರಾಟ. ಅದು ಮಾನಸಿಕ ದಟ್ಟಡವಿಯ ಮಧ್ಯೆ ಧ್ಯೇಯವಸ್ತುವೆಂಬ ದಿವ್ಯಮಂದಿರವನ್ನು ಹುಡುಕುವಂತೆ. ಗಿಡ ಬಳ್ಳಿ ಮುಳ್ಳು ಮುಂತಾದವುಗಳನ್ನೆಲ್ಲ ಕತ್ತರಿಸುತ್ತ ಮುಂದೆ ಸಾಗಬೇಕು. ನಾವು ಮುಂದೆ ಸಾಗಿದಂತೆ ಆ ದಿವ್ಯಮಂದಿರದ ಬೆಳಕು ನಮಗೆ ಮಾರ್ಗ ತೋರುತ್ತದೆ. ಕೆಲವೊಮ್ಮೆ ಆ ಬೆಳಕಿನ ಪ್ರಭೆಯಲ್ಲಿ ಮೈಮರೆತು ಜಾರಿಬಿಡುತ್ತೇವೆ ಅಥವಾ ದಾರಿತಪ್ಪುತ್ತೇವೆ. ಆದರೂ ಮುಂದೆ ಸಾಗಬೇಕು. ಆ ಬೆಳಕು ನಮಗೆ ಆಸರೆ, ನಮ್ಮ ನಂಬಿಕೆಯ ಕೈಹಿಡಿದು ಮುಂದೆ ಕರೆದುಕೊಂಡು ಹೋಗುತ್ತದೆ. ನಾವು ಅದಕ್ಕೆ ಶರಣಾಗಬೇಕು. ಇಲ್ಲಿಂದ ನಮ್ಮ ಅಹಂಕಾರಮೂಲ ಸಾಧನೆ ಕೊನೆಗೊಂಡು ಶರಣಾಗತಿಮೂಲ ಸಾಧನೆ ಪ್ರಾರಂಭವಾಗುತ್ತದೆ.

ಹೀಗೆ ನಮ್ಮ ಜೀವನದ ಬೇರೆ ಬೇರೆ ಹಂತಗಳ ಪೂರ್ಣ ಅನುಭವವನ್ನು ಪಡೆಯುತ್ತ ಮುಂದುವರಿದು ಕೊನೆಗೆ ದಿವ್ಯಾನುಭವದ ಮಂದಿರವನ್ನು ಪ್ರವೇಶಿಸಬೇಕು. ಜೀವನ ಅನುಭವದಿಂದಲೇ ಪ್ರಾರಂಭವಾಗಿ ಅನುಭವದಲ್ಲಿಯೇ ಕೊನೆಗೊಳ್ಳುತ್ತದೆ—ಅನುಭವವೊಂದೇ ಸತ್ಯವಾಗಿ ಉಳಿಯುತ್ತದೆ. ಜೀವನದ ಪ್ರತಿಯೊಂದು ಹಂತದಲ್ಲಿಯೂ ಅನುಭವವೊಂದೇ ಸತ್ಯ, ಉಳಿದುದೆಲ್ಲ ನಮ್ಮ ಪಾಲಿಗೆ ಮಿಥ್ಯೆ.

◆

## ಮಹಾತ್ಮರ ನಾಡಿನಲ್ಲಿ...

**ಚಿ**ತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ಮತ್ತು ವಿಶಿಷ್ಟವಾಗಿ ನಡೆದವು.

ಚಿತ್ರದುರ್ಗ ಜಿಲ್ಲೆಯ ಆಲೂರೆಂಬ ಗ್ರಾಮದಲ್ಲಿ ನಾವು ಹೋದ ಹಲವಾರು ಮನೆಗಳಲ್ಲಿ ಈಗಾಗಲೇ ದಿವ್ಯತ್ರಯರ ಭವ್ಯವಾದ ಚಿತ್ರಗಳು ರಾರಾಜಿಸುತ್ತಿರುವುದನ್ನು ಕಂಡು ನಮಗಾದ ಸಂತೋಷಕ್ಕೆ ಪಾರವೇ ಇಲ್ಲ. "ಈ ಚಿತ್ರ ಅಸಂಖ್ಯ ಮನೆಗಳಲ್ಲಿ ಮುಂದೆ ಪೂಜಿಸಲ್ಪಡುತ್ತದೆ" ಎಂದು ಶ್ರೀರಾಮಕೃಷ್ಣರೇ ತಮ್ಮ ಚಿತ್ರವನ್ನು ತೋರಿಸಿ ನುಡಿದ ಭವಿಷ್ಯ ಎಷ್ಟು ನಿಜವಾಗಿದೆ ಎಂದು ನಮಗರಿವಾಯಿತು.

**ನಾಯಕನ ಹಟ್ಟಿ** ಎಂಬುದು ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ಪವಿತ್ರಸ್ಥಾನವೆಂದು ಪರಿಗಣಿಸಲ್ಪಡುವ ಕ್ಷೇತ್ರ. ಅಲ್ಲಿ ಹೆಸರು ಕುಲ ಗೋತ್ರಗಳನ್ನು ಹೇಳಿಕೊಳ್ಳದ ಸಂತರೊಬ್ಬರು ಎಲ್ಲಿಂದರಲ್ಲಿ, ತಿಪ್ಪೆಗುಂಡಿಯ ಸನಿಹದಲ್ಲೂ ವಾಸಿಸುತ್ತಿದ್ದುದರಿಂದ ಅವರಿಗೆ ತಿಪ್ಪೇರುದ್ರಸ್ವಾಮಿಗಳೆಂದೇ ಹೆಸರಾಯಿತು. ಅದು ಮತೀಯ ಸೌಹಾರ್ದತೆಗೆ ಹೆಸರಾದ ಕ್ಷೇತ್ರ. ಮುಸ್ಲಿಮರೂ ಅಧಿಕ ಸಂಖ್ಯೆಯಲ್ಲಿ ಸ್ವಾಮಿಗಳ ಸಮಾಧಿಗೆ ನಡೆದುಕೊಳ್ಳುತ್ತಾರೆ. ಜ್ಞಾನವಾಹಿನಿ ಕಾರ್ಯಕ್ರಮದ ಅಂಗವಾಗಿ ಅಲ್ಲಿ ಬೆಳಗಿನ ಹೊತ್ತು ನಡೆದ ಸ್ವಾಮಿ ವಿವೇಕಾನಂದರ ಪ್ರತಿಮೆಯ ಮೆರವಣಿಗೆಯಲ್ಲಿ ಬಹಳ ಸಂಖ್ಯೆಯಲ್ಲಿ ಮುಸ್ಲಿಂ ಮಹಿಳೆಯರೂ ಕೂಡ ಭಾಗವಹಿಸಿದ್ದರು. ಸಂಜೆ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಸ್ಥಳೀಯ ಮಸೀದಿಯ ಮೇಲ್ವಿಚಾರಕರೂ ಬಂದಿದ್ದರು. ಅವರನ್ನೂ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಅವರು ಒಂದು ಆಸಕ್ತಿ ಕೆರಳಿಸುವ ವಿಷಯವನ್ನು ಹೇಳಿದರು. ಹೈದರಾಲಿ ಈ ಸ್ಥಳಕ್ಕೆ ಬಂದಾಗ ಅವನಿಗೆ ತಿಪ್ಪೇರುದ್ರಸ್ವಾಮಿಗಳ ಕೃಪೆಯಿಂದ ಮಗ ಹುಟ್ಟಿದನಂತೆ. ಆ ಮಹಾತ್ಮರ ಹೆಸರಿನಿಂದಲೇ ಅವನಿಗೆ ಟಿಪ್ಪೂ ಎಂದು ಹೆಸರಾಯಿತಂತೆ. ಇಲ್ಲಿನ ದೇವಸ್ಥಾನದ ರಥ ಬೃಹದಾಕಾರವಾಗಿದ್ದು, ಗಾಲಿಗಳೇ ೧೦ ಅಡಿಗೂ ಹೆಚ್ಚು ಎತ್ತರವಾಗಿವೆ. ರಥೋತ್ಸವದ ಸಮಾರಂಭದಲ್ಲಿ ಒಂದು ಲಕ್ಷಕ್ಕೂ ಮಿಕ್ಕಿ ಜನ ಸೇರುತ್ತಾರೆ. ಅಲ್ಲಿ ನಡೆದ ಜ್ಞಾನವಾಹಿನಿ ಕಾರ್ಯಕ್ರಮ ಅತ್ಯಂತ ವ್ಯವಸ್ಥಿತವಾಗಿ ನಡೆದುದಲ್ಲದೆ ಮುಸ್ಲಿಂ ಮಹಿಳೆಯರೂ ಕೂಡ ಆಶ್ರಮದ ಪುಸ್ತಕಗಳನ್ನು ಆಸಕ್ತಿಯಿಂದ ಖರೀದಿಸುತ್ತಿದ್ದುದು ಸಂತೋಷವನ್ನು ಉಂಟುಮಾಡಿತು.

ಬಳ್ಳಾರಿ ಜಿಲ್ಲೆಯಲ್ಲಿ **ಚೆಳ್ಳಗುರ್ಕಿ** ಎನ್ನುವುದು ಪವಿತ್ರ ಕ್ಷೇತ್ರ. **ಎರ್ರಿತಾತ** ಎಂಬ ಅವಧೂತರು ಬಂದು ನೆಲೆಸಿ ಇಲ್ಲಿರುವ ಜನರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡಿದ ಸ್ಥಳ. ಈ ಅವಧೂತರಿಂದ ಬಹಳಷ್ಟು ಪವಾಡಗಳು ನಡೆದಿರುವುದು ಅಲ್ಲಿ ಮಾತನಾಡಿಸಿದ ಜನರಿಂದ ತಿಳಿಯಿತು. ಎರ್ರಿತಾತರವರ ಜೀವಂತ ಸಮಾಧಿಯು ಒಂದು ದೊಡ್ಡ ದೇವಸ್ಥಾನದ ಆವರಣದಲ್ಲಿದೆ. ಎರ್ರಿತಾತರವರ ಚಿತ್ರವನ್ನು ನೋಡಿದರೆ ವಾಲ್ಮೀಕಿಯನ್ನೋ ವಸಿಷ್ಠರನ್ನೋ ನೋಡಿದ ಹಾಗೆ ಭಾಸವಾಗುತ್ತದೆ. ಇಲ್ಲಿ ಒಂದು ಖಾನಾವಳಿ ಇದೆ. ಬಹಳ ಸ್ವಚ್ಛವಾದ ಜಾಗ. ಒಬ್ಬ ಹಿರಿಯ ಮಹಿಳೆ ಇದನ್ನು ನಡೆಸುತ್ತಿದ್ದಾರೆ. ಒಳಗೆ ವಿವೇಕಾನಂದರ ಚಿತ್ರ ಸಹಿತ ಬೇರೆ ಬೇರೆ ದೇವದೇವಿಯರ ಚಿತ್ರಗಳಿವೆ. ಆ ಹಿರಿಯ ಮಹಿಳೆ ಆಧ್ಯಾತ್ಮಿಕ ಜೀವಿ. ಅವರು ಶ್ರೀರಾಮಕೃಷ್ಣರ ಬಗ್ಗೆ ಹೆಚ್ಚು ವಿವರಗಳನ್ನು ನಮ್ಮಿಂದ ಬಯಸಿ, ತಿಳಿದುಕೊಂಡು ಬಹಳ ಆನಂದಪಟ್ಟರು.

ಬಳ್ಳಾರಿ ಜಿಲ್ಲೆಯ **ದಮ್ಮೂರು** ಇನ್ನೊಂದು ಇಂತಹ ಪವಿತ್ರ ಕ್ಷೇತ್ರ. ಅಲ್ಲಿ **ವೆಂಕಾವಧೂತರೆಂಬ** ಮಹಾತ್ಮರು ತಪಸ್ಸು ಮಾಡಿದ್ದರು. ಅವರು ಒಂದು ದೊಡ್ಡ ಬಂಡೆಯನ್ನು ತಾವೇ ಕೊರೆದು ಜಾಗ ಮಾಡಿಕೊಂಡು, ಅಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರಂತೆ. ಅವರ ವಿಗ್ರಹ ಆ ಗುಹೆಯಲ್ಲಿದೆ. ಸ್ವಲ್ಪ ಬೆನ್ನು ಬಾಗಿದ, ಋಷಿಯಂತೆ ಕಾಣುವ ಬೆಳ್ಳಿಯ ಅವರ ವಿಗ್ರಹವನ್ನು ಅಲ್ಲಿ ಪೂಜಿಸುತ್ತಾರೆ. ಇಲ್ಲಿನ ಕಾರ್ಯಕ್ರಮದಲ್ಲಿ ಒಬ್ಬರು ವಿವೇಕಪ್ರಭ ಚಂದಾ ಮಾಡಿಸಿದರು. ಅದನ್ನು ನೋಡಿ ಅವರ ಗೆಳೆಯರ ಗುಂಪಲ್ಲಿ ೫ ಮಂದಿ ಒಡನೆ ಮುಂದೆಬಂದು ಚಂದಾ ಮಾಡಿಸಿದರು.

ಹಲವಾರು ಕಡೆ ಚಿಕ್ಕಚಿಕ್ಕ ಹಳ್ಳಿಗಳಲ್ಲೂ ಶಾಲಾಕೊಠಡಿಗಳಲ್ಲಿ ಶ್ರೀರಾಮಕೃಷ್ಣರ ಹಳೆಯ ಒಂದು ಒಳ್ಳೆಯ ಭಾವಚಿತ್ರ ಕಾಣಬರುತ್ತದೆ. ನಾವು ಎಲ್ಲಿಗೆ ಹೋದರೂ ಶ್ರೀರಾಮಕೃಷ್ಣರಾಗಲೀ ಸ್ವಾಮಿ ವಿವೇಕಾನಂದರಾಗಲೀ ಅಲ್ಲಿ ಆಗಲೇ ಚಿತ್ರಗಳ ರೂಪದಲ್ಲಿ ಇರುತ್ತಿದ್ದುದನ್ನು ಕಣ್ಣಾರೆ ಕಂಡೆವು.

*–ಜ್ಞಾನವಾಹಿನಿ ತಂಡ*